ಸ್ವಲ್ಪ ಹೊತ್ತು ಹರಟೆ ಹೊಡೆದು, ಅಮ್ಮ ಅಪ್ಪ ಬರುವುದರೊಳಗೆ ಮನೆ ಸೇರಬೇಕೆಂದು ಹೇಳಿ ಆಟೊ ಸ್ಟ್ಯಾಂಡ್ ತೋರಿಸೆಂದು ಅವಸರಿಸಿದೆ. ದಾರಿಯಲ್ಲೇ ಆಟೊ ಬಂದಿದ್ದರಿಂದ ಹತ್ತಿಯೂಬಿಟ್ಟೆ.

ಮಗಳಿಂದ ಅಮ್ಮ ನಗುವುದು ಕಲಿತಳೋ ಅಮ್ಮನಿಂದ ಮಗಳು ನಗುವುದನ್ನು ಕಲಿತಳೋ? ಊಟ ಮಾಡಿ ಒಣಹಾಕಿದ ಟವೆಲ್ಲಿಗೆ ಕೈ ಒರೆಸಿಕೊಳ್ಳುತ್ತಿದ್ದಾಗ ಗಳಕ್ಕೆ ಅವರಿಬ್ಬರ ಬಟ್ಟೆಗಳು ಮಾತ್ರ ಇದ್ದವು. ಬಚ್ಚಲುಮನೆಗೆ ಹೋದಾಗಲೂ ಎರಡೇ ಟೂತ್‌ಬ್ರಷ್‌ಗಳಿದ್ದವು. ಹಾಗೇ ಶೇವಿಂಗ್ ಬ್ರಷ್, ಬ್ಲೇಡ್ ಇರದೆ ಅಂಗೈಯಗಲದ ಕನ್ನಡಿಯ ಚೌಕಟ್ಟಿಗೆ ಒಂದೇ ಅಳತೆಯ ಕೆಂಪು ಟಿಕಳಿಗಳು ಅಂಟಿದ್ದವು, ಅವರಿಬ್ಬರದೇ ಒಳುಡುಪುಗಳಿದ್ದವು. ಇನ್ನು ಕಾದಂಬರಿಗಳು? ಅವರ ಮನೆಯಲ್ಲಿ ಪುಸ್ತಕಗಳ ಶೆಲ್ಫೇ ಇರಲಿಲ್ಲ. ಚಪ್ಪಲಿ ಗೂಡಿನಲ್ಲಿಯೂ ಹೆಣ್ಣುಮಕ್ಕಳ ಚಪ್ಪಲಿಗಳು ಮಾತ್ರ ಇದ್ದವು.

ಕಾಲೇಜಿಗೆ ಮೊಸರನ್ನ ಉಪ್ಪಿನಕಾಯಿ ತಂದಾಗೆಲ್ಲ ಶಾಕಾಂಬರಿ ಡಬ್ಬಿಗೆ ಮುಚ್ಚಳವನ್ನು ಅಡ್ಡಡ್ಡ ಹಿಡಿದು ಯಾರೊಂದಿಗೂ ಹಂಚಿಕೊಳ್ಳದೆ, 'ನಾನ್ಯಾರಿಗೂ ಕೊಡಲ್ಲಪ್ಪ ಅಮೃತಾ' ಎಂದು ಕಣ್ ಹೊಡೆದು ತಿನ್ನುತ್ತಿದ್ದದ್ದು, ಉಳಿದ ಗೆಳತಿಯರು ಪಾರ್ಲರಿಗೆ ಹೋಗಿ ಫೇಷಿಯಲ್ ಮಾಡಿಸಿಕೊಂಡು ಬೀಗುವಾಗ ತನಗೆ ಕೆಮಿಕಲ್ ಅಲರ್ಜಿಯೆಂದೂ, ಹಳೆಯ ಟಾಪ್ ಹಾಕಿಕೊಂಡಾಗೆಲ್ಲ ಅದರ ಮೇಲೊಂದು ಸ್ವೆಟರ್ ಹಾಕಿಕೊಂಡೋ, ದುಪಟ್ಟಾ ಪೂರ್ತಿಯಾಗಿ ಹೊದ್ದುಕೊಂಡೋ, ಅದು

